ಇ) ಈ ಕೆಳಕಂಡ ಯೋಜನೆಗಳು ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಗುರಿ ಹೊಂದಿದೆ.

1. ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆ.
2. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ನಡೆಸುವ ವಿಜ್ಞಾನ ಸಮ್ಮೇಳನಗಳು.
3. ವರ್ಚುಯೆಲ್ ಲ್ಯಾಬೋರೇಟರಿ.
4. ಸಂಚಾರಿ ವಸ್ತು ಪ್ರದರ್ಶನಾಲಯ.
5. ವಿಜ್ಞಾನ ಕಾರ್ಯಾಗಾರಗಳು.
6. ವಿಜ್ಞಾನ ಜಾಗೃತಿ ಕಾರ್ಯಕ್ರಮಗಳು.
7. ಲ್ಯಾಬ್–ಇನ್–ಎ–ಬಾಕ್ಸ್ ಕಿಟ್‌ಗಳ ವಿತರಣೆ.
8. ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ಪ್ರಯೋಗಾಲಯ.
9. ವಿಜ್ಞಾನ ಮತ್ತು ಇಂಜಿನಿಯರಿಂಗ್ ಪದವಿಧರರಿಗೆ ಉಪನ್ಯಾಸ ಮಾಲಿಕೆ.
10. ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮಗಳು.

ಮಹಾನಗರ ಪಾಲಿಕೆಗಳಿಗೆ ಅನುದಾನ

495(1113); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣಕ್ಕಾಗಿ ಮಹಾನಗರ ಪಾಲಿಕೆಗಳಿಗೆ ಮಂಜೂರು ಮಾಡಿರುವ ಅನುದಾನ ಎಷ್ಟು (ಮಹಾನಗರ ಪಾಲಿಕೆವಾರು ಮೂರು ವರ್ಷಗಳ ವಿವರ ನೀಡುವುದು)

ಆ) ಈ ಅನುದಾನದಲ್ಲಿ ಬಳಕೆಯಲ್ಲಿ ವಿಫಲವಾಗಿರುವ ಮಹಾನಗರ ಪಾಲಿಕೆಗಳು ಯಾವುವು; ಬಳಕೆಯಾಗದೆ ಇರುವ ಅನುದಾನ ಎಷ್ಟು (ಮಹಾನಗರ ಪಾಲಿಕೆವಾರು ಮೂರು ವರ್ಷಗಳ ವಿವರ ನೀಡುವುದು);

ಇ) ರಾಜ್ಯದಲ್ಲಿ ಅನುದಾನ ಬಳಕೆಯಲ್ಲಿ ಈ ಮಹಾನಗರ ಪಾಲಿಕೆಗಳು ವಿಫಲವಾಗಲು ಕಾರಣವೇನು; ಈ ಮಹಾನಗರ ಪಾಲಿಕೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣಕ್ಕಾಗಿ ಮಹಾನಗರ ಪಾಲಿಕೆಗಳಿಗೆ ಮಂಜೂರು ಮಾಡಿರುವ ಅನುದಾನದ ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಸಲ್ಲಿಸಿದೆ.

ಆ) ತುಮಕೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಮಹಾನಗರ ಪಾಲಿಕೆಗಳು ಅನುದಾನ ಬಳಕೆಯಲ್ಲಿ ವಿಫಲವಾಗಿರುತ್ತವೆ. ಅನುಬಂಧ–1, 2, ಮತ್ತು 3 ರಲ್ಲಿ ವಿವರವನ್ನು ಸಲ್ಲಿಸಿದೆ.

ಇ) ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಈ ಕೆಳಕಂಡ ಕಾರಣಗಳಿಂದ ವಿಳಂಬವಾಗಿರುತ್ತದೆ.

1. ಮಹಾನಗರಪಾಲಿಕೆಗಳ ಪರಿಷತ್ ಸಭೆಯಲ್ಲಿ ಕ್ರಿಯಾಯೋಜನೆಯ ಅನುಮೋದನೆ ಪಡೆಯುವಲ್ಲಿ.
2. ಟೆಂಡರ್ ಪ್ರಕ್ರಿಯೆಯಲ್ಲಿ ಹಾಗೂ ಅರ್ಹ ಗುತ್ತಿಗೆದಾರರನ್ನು ನಿಗದಿ ಮಾಡುವಲ್ಲಿನ ಕ್ರಿಯೆಯಲ್ಲಿನ ಅವಧಿ.
3. ವೈಯಕ್ತಿಕ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ, ಇತ್ಯಾದಿ.

ಅನುದಾನವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ವಿಫಲರಾಗಿರುವ ಪಾಲಿಕೆಗಳ ಆಯುಕ್ತರು ಮತ್ತು ಸಂಬಂಧಿಸಿದ ಅಧಿಕಾರಿಗಳು ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರುಗಳಿಗೆ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಕಾರಣ ಕೇಳಿ ನೋಟೀಸುಗಳನ್ನು ಜಾರಿ ಮಾಡಲಾಗಿದೆ. ಅಲ್ಲದೇ, ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೂ ಸಹ ಅರೆಸರ್ಕಾರಿ ಪತ್ರ ಬರೆದು ಈ ಬಗ್ಗೆ ವೈಯಕ್ತಿಕ ಗಮನಹರಿಸುವಂತೆ ಹಾಗೂ ಯೋಜನೆಯ ಅನುಷ್ಠಾನದಲ್ಲಿ ಬೇಜವಾಬ್ದಾರಿ ತೋರಿಸುವ ಅಧಿಕಾರಿ/ಸಿಬ್ಬಂದಿ ವರ್ಗದವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಲು ಕೋರಲಾಗಿರುತ್ತದೆ. ಅಸಮರ್ಪಕವಾಗಿ ಅನುದಾನ ಬಳಕೆ ಮಾಡಿಕೊಂಡಿರುವ ಪಾಲಿಕೆಗಳ ಆಯುಕ್ತರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಅನುಬಂಧ–1					
ಕ್ರ.ಸಂ	ನಗರ ಪಾಲಿಕೆ ಹೆಸರು	2012–13ನೇ ಸಾಲಿನ ಎಸ್.ಎಫ್.ಸಿ ಮತ್ತು ಪಾಲಿಕೆ ನಿಧಿಯ ಕ್ರಿಯಾಯೋಜನೆಯಂತೆ ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ)			
		ಒಟ್ಟು ಮೊತ್ತ	ಖರ್ಚಾದ ಮೊತ್ತ	ಬಾಕಿ ಶುಲ್ಕ	ಶೇ. ಪ್ರಗತಿ (5/4*100)
1	2	4	5	6	7
1	ತುಮಕೂರು	555.44	226.35	329.09	40.75
2	ದಾವಣಗೆರೆ	538.98	298.32	129.74	55.35
3	ಶಿವಮೊಗ್ಗ	624.29	159.39	464.9	25.53
4	ಮೈಸೂರು	1089.85	626.04	463.81	57.44
5	ಮಂಗಳೂರು	777.99	390.85	387.14	50.24
6	ಬೆಳಗಾವಿ	697.35	317.78	379.57	45.57
7	ಬಿಜಾಪುರ	1191.81	304.06	39.87	25.51
8	ಹುಬ್ಬಳ್ಳಿ–ಧಾರವಾಡ	416.10	362.72	53.47	87.17
9	ಕಲಬುರಗಿ	1638.08	545.12	1092.96	33.28
10	ಬಳ್ಳಾರಿ	525.13	329.46	195.67	62.74

ಅನುಬಂಧ–2					
ಕ್ರ.ಸಂ	ನಗರ ಪಾಲಿಕೆ ಹೆಸರು	2012–13ನೇ ಸಾಲಿನ ಎಸ್.ಎಫ್.ಸಿ ಮತ್ತು ಪಾಲಿಕೆ ನಿಧಿಯ ಕ್ರಿಯಾಯೋಜನೆಯಂತೆ ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ)			
		ಒಟ್ಟು ಮೊತ್ತ	ಖರ್ಚಾದ ಮೊತ್ತ	ಬಾಕಿ ಶುಲ್ಕ	ಶೇ. ಪ್ರಗತಿ (5/4*100)
1	2	4	5	6	7
1	ತುಮಕೂರು	512.520	367.120	145.400	71.630
2	ದಾವಣಗೆರೆ	629.520	354.820	144.960	56.364
3	ಶಿವಮೊಗ್ಗ	659.900	156.010	503.890	23.641

4	ಮೈಸೂರು	1633.430	295.680	1337.750	18.102
5	ಮಂಗಳೂರು	726.140	451.040	275.100	62.115
6	ಬೆಳಗಾವಿ	552.150	358.150	193.970	64.865
7	ಬಿಜಾಪುರ	265.990	197.400	68.590	74.213
8	ಹುಬ್ಬಳ್ಳಿ-ಧಾರವಾಡ	488.480	191.630	296.850	39.230
9	ಕಲಬುರಗಿ	1546.250	369.270	1177.280	23.882
10	ಬಳ್ಳಾರಿ	374.170	244.050	130.120	65.224

ಅನುಬಂಧ–3					
ಕ್ರ.ಸಂ	ನಗರ ಪಾಲಿಕೆ ಹೆಸರು	2014–15ನೇ ಸಾಲಿನ ಎಸ್.ಎಫ್.ಸಿ ಮತ್ತು ಪಾಲಿಕೆ ನಿಧಿಯ ಕ್ರಿಯಾಯೋಜನೆಯಂತೆ ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ)			
		ಒಟ್ಟು ಮೊತ್ತ	ಖರ್ಚಾದ ಮೊತ್ತ	ಬಾಕಿ ಶುಲ್ಕ	ಶೇ. ಪ್ರಗತಿ (5/4*100)
1	2	4	5	6	7
1	ತುಮಕೂರು	481.65	414.11	67.54	85.98
2	ದಾವಣಗೆರೆ	661.49	227.00	289.53	34.32
3	ಶಿವಮೊಗ್ಗ	844.80	477.08	367.72	56.47
4	ಮೈಸೂರು	3060.83	35.25	3025.58	1.15
5	ಮಂಗಳೂರು	1114.56	796.82	317.74	71.49
6	ಬೆಳಗಾವಿ	767.83	302.78	465.05	39.43
7	ಬಿಜಾಪುರ	438.80	94.74	344.06	21.59
8	ಹುಬ್ಬಳ್ಳಿ-ಧಾರವಾಡ	882.31	544.31	338	61.69
9	ಕಲಬುರಗಿ	2349.92	789.00	1560.94	33.58
10	ಬಳ್ಳಾರಿ	471.45	212.21	259.24	45.01